ಸಾಕ್ಷಿದಾರನನ್ನು ಕರೆಸಿ ಪ್ರಮಾಣೀಕರಿಸಲಾಯಿತು. ಪ್ರ.ಮಾ.ದಿಃ 15.07.2023.

**ಮುಂದುವರಿದ ಪಾಟೀ ಸವಾಲು – ಪ್ರತಿವಾದಿ ಪರ ಶ್ರೀ ಎಫ್. ಎಂ. ಎಂ. ವಕೀಲರಿಂದ.**

1) ಸದರಿ ದಾವಾ ಆಸ್ತಿ ರಿ. ಸ. ನಂಃ 86/1+2+4+5+3/ಬಿ ಕ್ಷೇತ್ರ 5 ಗುಂಟೆ 16 ಗುಂಟೆ ಇತ್ತು ಎಂದರೆ ಸರಿ. ಸದರಿ ಆಸ್ತಿ ಮಲ್ಲೂರು ಗ್ರಾಮಕ್ಕೆ ಹೊಂದಿಕೊಂಡು ಇದೆ ಎಂದರೆ ಸರಿ. ಸದರಿ ಜಮೀನಿನಲ್ಲಿ ದನ ಕರುಗಳು ರಾತ್ರಿ ಹೊತ್ತಿನಲ್ಲಿ ಮೇಯುವುದರಿಂದ ಬೆಳೆ ನಾಶವಾಗುತ್ತಿತ್ತು ಎಂದರೆ ಸರಿ. ಆದ್ದರಿಂದ ನಮಗೆ ಲುಕ್ಸಾನು ಆಗುತ್ತಾ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನು ಸಾಗು ಮಾಡದೇ ಹಾಗೇ ಬಿಟ್ಟಿದ್ದೇವೆ ಎಂದರೆ ಸರಿಯಲ್ಲ. ಆದ್ದರಿಂದ ಮಲ್ಲೂರು ಗ್ರಾಮಸ್ಥರು ಸದರಿ ಜಮೀನಿನಲ್ಲಿ ಶೆಡ್ಡು, ಮತ್ತು ಇತರೇ ಉಪಯೋಗಕ್ಕೆ ಬಳಸಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿಯು ಸದರಿ ಜಮೀನನ್ನು ಮಾರಾಟ ಮಾಡಿ ಬೇರೆ ಕಡೆಗೆ ಆಸ್ತಿ ಖರೀದಿ ಮಾಡಿರುತ್ತೇವೆ ಎಂದು ಸಾಕ್ಷ್ಯ ನುಡಿಯುತ್ತಾರೆ.

2) ಸದರಿ ಜಮೀನನ್ನು ನನ್ನ ತಂದೆ ತುಂಡು ತುಂಡಾಗಿ ಸಾಕಷ್ಟು ಜನರಿಗೆ ಖರೀದಿ ಕೊಟ್ಟಿರುತ್ತಾರೆ ಎಂದರೆ ಸರಿ ಮತ್ತು ಕೋರ್ಟ ಮುಖಾಂತರ ಡಿಕ್ರಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ನಮಗೆ ವಹಿವಾಟು ಉಪಭೋಗಕ್ಕೆ ಉಳಿದಿರುವುದಿಲ್ಲ ಎಂದರೆ ಸರಿಯಲ್ಲ. ನಾನು 7 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಮ್ಮ ತಂದೆ ಮರಣ ಹೊಂದುವ ಪೂರ್ವದಲ್ಲಿ ಆಸ್ತಿ ಪರಭಾರೆ ಮಾಡಿದ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳನ್ನು ನೋಡಿರುತ್ತೇನೆ. ಸದರಿ ದಾಖಲೆಗಳನ್ನು ದಾವೆ ಮಾಡುವ ಪೂರ್ವದಲ್ಲಿ ನೋಡಿರುತ್ತೇನೆ. ನಾನು ಹಾಜರುಪಡಿಸಿದ ದಾಖಲೆಗಳು ಕಾಯ್ದೆಶೀರ ಇಲ್ಲವೆಂದು ಅದರ ಪ್ರಕಾರ ಕ್ರಮಕ್ಕೈಗೊಂಡಿಲ್ಲ ಎಂದರೆ ಸರಿ

3) ಪ್ರತಿವಾದಿ 04.01.2010 ರಲ್ಲಿ ನಮ್ಮ ತಂದೆಯ ವಿರುದ್ಧ ದಾವಾ ಆಸ್ತಿಯ ಪೈಕಿ 6 ಗುಂಟೆ ಜಮೀನನ್ನು ವಿರುದ್ಧ ಹಕ್ಕಿನಿಂದ ಮಾಲೀಕ ಎಂದು ಡಿಕ್ರಿ ಪಡೆದಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ನಿಪಿ–6 ರಲ್ಲಿ ಶಿವಪ್ಪ ರುದ್ರಪ್ಪ ಎಲಿಗಾರ ಎಂದು ಇರುವ ಸಹಿ ನಮ್ಮ ತಂದೆಯ ಸಹಿ ಎಂದರೆ ಸರಿಯಲ್ಲ. ನಮ್ಮ ತಂದೆ ಅಸಲು ದಾವಾ ಸಂಖ್ಯೆ 197/2009 ರಲ್ಲಿ ಹಾಜರಾಗಿ ವಕಾಲತ ಮತ್ತು ಪ್ರತಿವಾದ ಪತ್ರ ಶ್ರೀ ಆರ್. ಸಿ. ಶಿಡೇನೂರು ಮತ್ತು ಶ್ರೀ ಎಸ್. ಸಿ. ಶಿಡೇನೂರು ವಕೀಲರ ಮುಖಾಂತರ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ ಪ್ರತಿವಾದಿಯ ಪರವಾಗಿ ನಿರ್ಣಯ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

4) ನಮ್ಮ ತಂದೆ ದಾವಾ ರಿ. ಸ. ನಂಃ 86 ರ ಪೈಕಿ 1 ಎಕರೆ 28 ಗುಂಟೆ ಮಾನಪ್ಪ ನೀಲಕಂಠಪ್ಪ ಬಡಿಗೇರ ಇವರಿಗೆ ದಿಃ 30.03.1998 ರಂದು ಖರೀದಿ ಕೊಟ್ಟ ಬಗ್ಗೆ ನೊಂದಾದ ಖರೀದಿ ಪತ್ರ ಇದೆ ಎಂದರೆ ಸರಿ. ಸದರಿ ಖರೀದಿ ಪತ್ರದಲ್ಲಿ ಶಿವಪ್ಪ ರುದ್ರಪ್ಪ ಎಲಿಗಾರ ಎಂದು ಸಹಿ ಮಾಡಿರುತ್ತಾರೆ ಎಂದರೆ ಸರಿ. ಆದ್ದರಿಂದ ನಿಪಿ–6 ರಲ್ಲಿ ಮಾಡಿದ ಸಹಿ ಮತ್ತು ಮೇಲಿನ ಖರೀದಿ ಪತ್ರದಲ್ಲಿನ ಸಹಿ ಒಂದೇ

ಇರುತ್ತದೆ ಎಂದರೆ ಸರಿಯಲ್ಲ.

5) ನಮ್ಮ ತಂದೆಯ ಮೇಲೆ ಅಸಲು ದಾವಾ ನಂಬರ 35/2009 ರಂತೆ ಬಸವರಾಜ ವೀರಪ್ಪ ಕೊಡಿಹಳ್ಳಿ ಎನ್ನುವವರು ದಾವಾ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಕುಮಾರಿ ವಿ. ಸಿ. ಯರಗಲ್ ವಕೀಲರ ಮುಖಾಂತರ ಹಾಜರಾಗಿದ್ದಾರೆ ಎಂದರೆ ಸರಿಯಲ್ಲ. ಅಸಲು ದಾವಾ ನಂಬರ 36/2009 ರಂತೆ ನಮ್ಮ ತಂದೆಯ ಮೇಲೆ ಇನ್ನೊಂದು ದಾವಾ ದಾಖಲು ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಆ ದಾವೆಯಲ್ಲಿ ಸಹ ಕುಮಾರಿ ವಿ. ಸಿ. ಯರಗಲ್ ವಕೀಲರ ಮುಖಾಂತರ ಹಾಜರಾಗಿದ್ದಾರೆ ಎಂದರೆ ಸರಿಯಲ್ಲ. ಸದರಿ ದಾವೆಗಳು ದಿಃ 03.07.2009 ರಲ್ಲಿ ನಮ್ಮ ತಂದೆಯ ವಿರುದ್ಧ ಡಿಕ್ರಿ ಆಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ ಸದರಿ ದಾವೆಗಳ ವಿರುದ್ಧ ನಾನು ಇಲ್ಲಿಯವರೆಗೆ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ.

6) ಅಸಲು ದಾವಾ ಸಂಖ್ಯೆ 197/2009 ರಲ್ಲಿ ಆದೇಶದ ಮೇರೆಗೆ ಪ್ರತಿವಾದಿಯ ಹೆಸರು ಪಹಣಿಯಲ್ಲಿ ದಾಖಲು ಆಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಂತರ ಹುಸೇನಸಾಬ ದೊಡ್ಮನಿ ಇವರು ಸದರಿ ಆಸ್ತಿಗೆ ದಾವೆ ಮಾಡಿ ಡಿಕ್ರಿ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಂತರ ನನ್ನ ತಂದೆ ಮತ್ತು ಹುಸೇನಸಾಬ ದೊಡ್ಮನಿ ನೊಂದಾದ ಅದಲು ಬದಲು ದಾಖಲೆ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಂತರ ಪ್ರತಿವಾದಿ ಹೆಸರು ದಾಖಲಿಸುವ ಪೂರ್ವದಲ್ಲಿ ನನ್ನ ತಂದೆ 2013 ರಲ್ಲಿ ಪೋತಿಯಾಗಿರುತ್ತಾರೆ ಎಂದರೆ ಸರಿ. ನಂತರ ನಮ್ಮ ತಂದೆಯಿಂದ ನಾವು ವಾರಸಾ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ನಂತರ ನಾನು ನನ್ನ ಹೆಂಡತಿಗೆ 2 ಗುಂಟೆ ಕ್ಷೇತ್ರವನ್ನು ಕೇವಲ ವರದಿ ಮೂಲಕ ಹಕ್ಕು ಬಿಟ್ಟು ಕೊಟ್ಟಿರುತ್ತೇನೆ ಎಂದರೆ ಸರಿ. ನಂತರ ಪ್ರತಿವಾದಿ ಮತ್ತು ನನ್ನ ಕಬೂಲಿ ಮೇರೆಗೆ ಡಿಕ್ರಿ ಪ್ರಕಾರ 6 ಗುಂಟೆ ಜಮೀನಿಗೆ ನಕ್ಷೆ ಮಾಡಲು ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ನಂತರ ನಾನು ದುರಾಸೆಗೆ ಬಲಿಯಾಗಿ ಪ್ರತಿವಾದಿಯ ಹೆಸರು ದಾಖಲು ಆಗದಂತೆ ತಕರಾರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಂತರ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

7) ಪ್ರತಿವಾದಿ ಆಸ್ತಿಯ ಪೂರ್ವಕ್ಕೆ ಸುರೇಶ ಹೊಂಡದಮಠ, ಪಶ್ಚಿಮಕ್ಕೆ ಮೂಕನಗೌಡ ಮರಿಗೌಡ ಸೊರಬಗೌಡರ, ದಕ್ಷಿಣಕ್ಕೆ ರಾಜಪ್ಪ ಗಾಯಕವಾಡ ಮತ್ತು ಉತ್ತರಕ್ಕೆ ಪ್ರತಿವಾದಿಯ ಪಂಚಾಯತಿ ಆಸ್ತಿ 8 ಮತ್ತು 9 ಇದ್ದು, ಅದನ್ನು ಉಪಯೋಗಿಸುತ್ತಿದ್ದಾನೆ ಎಂದರೆ ಸರಿಯಲ್ಲ. ನಮ್ಮ ತಂದೆ ಖರೀದಿ ಕೊಟ್ಟ ಕರಬಸಪ್ಪ ನೂರಂದನವರ, ನರಸಪ್ಪ ಗಾಯಕವಾಡ, ಶಂಭು ಕುಲಕರ್ಣಿ, ವೀರಭದ್ರಪ್ಪ ಕುಲಕರ್ಣಿ, ಸುಭಾಷ ಅಕ್ಕಿ, ರುದ್ರಪ್ಪ ಕುಲಕರ್ಣಿ, ಶಿವನಗೌಡ ಸೊರಬಗೌಡ್ರ, ಮಹದೇವಪ್ಪ ಮಲಕಪ್ಪ ಕುಲಕರ್ಣಿ, ಮಾಲತೇಶ ಬಡಿಗೇರ, ಶಶಿದರ ಬುಡಪನಹಳ್ಳಿ, ಸುರೇಶ, ರುದ್ರಯ್ಯ ಚಿಲ್ಲೂರುಮಠ, ಮೂಕನಗೌಡ ಸೊಲಬಗೌಡ್ರ ಇವರು ನಮ್ಮ ತಂದೆ ಖರೀದಿ ಕೊಟ್ಟ ಆಸ್ತಿಯಲ್ಲಿ ಕಬ್ಜಾದಲ್ಲಿ ಇದ್ದಾರೆ ಎಂದರೆ ಸಾಕ್ಷಿಯು ಅವರು ಖರೀದಿ ತೆಗೆದುಕೊಂಡು ಕಬ್ಜಾ ಇದ್ದಾರೆ ಎಂದು ಸಾಕ್ಷ್ಯನುಡಿಯುತ್ತಾರೆ.

8) ಸದರಿ ಮೇಲಿನ ಆಸ್ತಿ ಒಂದು ಗುಂಟೆಗೆ ಸುಮಾರು 2,00,000/- ರೂಪಾಯಿಗಳಿಂತ ಬೆಲೆ ಹೊಂದಿರುತ್ತದೆ ಎಂದರೆ ಸರಿ. ನಾನು ದುರಾಸೆಗೆ ಬಿದ್ದು, ಸುಳ್ಳು ಚೆಕ್ಕುಬಂದಿ ಸಲ್ಲಿಸಿ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿ 2009 ಕ್ಕಿಂತ ಸುಮಾರು 30 ವರ್ಷದಿಂದ ದಾವಾ ಆಸ್ತಿಯಲ್ಲಿ ಕಬ್ಜಾ ವಹಿವಾಟು ಇದ್ದನು ಎಂದರೆ ಸರಿಯಲ್ಲ. ಪ್ರತಿವಾದಿಯರ ಆಸ್ತಿಯನ್ನು ಎತ್ತಿ ಹಾಕುವ ಉದ್ದೇಶದಿಂದ ಸುಳ್ಳು ದಾವಾ ಹೂಡಿ ಸುಳ್ಳು ಸಾಕ್ಷ್ಯನುಡಿಯುತ್ತೀದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ಸಹಿ/-

ದಿವಾಣಿ ನ್ಯಾಯಾಧೀಶರು,

ಬ್ಯಾಡಗಿ.